Starting of Fourth University

511. Sri S. M. SHEERANALY CHANDRASEKHAR (Hosanagar).—

Will the Minister for Education be pleased to state :—

(*a*) whether a final decision has been taken in the matter of starting of the fourth University in the State ;

(*b*) if so, the place of its location ?

Sri A. R. BADARINARAYANA (Minister for Education).—

(*a*) No.

(*b*) Does not arise.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸಂಸ್ಥಾನದಲ್ಲಿರತಕ್ಕ ವಿದ್ಯಾರ್ಥಿಗಳ ಸಂಖ್ಯೆ ಮತ್ತು ಕಾಲೇಜುಗಳ ಸಂಖ್ಯೆಗನುಗುಣವಾಗಿ ನಾಲ್ಕನೇ ವಿಶ್ವವಿದ್ಯಾನಿಲಯದ ಆವಶ್ಯಕತೆ ಇದೆ ಎಂದು ಮಾನ್ಯ ಮಂತ್ರಿಗಳು ಭಾವಿಸುವುದಿಲ್ಲವೇ ಸ್ವಾಮೀ ?

† ಶ್ರೀ ಎ. ಆರ್. ಬದರಿನಾರಾಯಣ.—ನಾನು ಭಾವಿಸುವ ಪ್ರಶ್ನೆ ಇಲ್ಲ. ಗಜೇಂದ್ರಗಡ್ಕರ್ ಅವರ ಸಮಿತಿಯವರು 30ಕ್ಕಿಂತ ಕಡಮೆಯಾಗಿ60ಕ್ಕಿಂತ ಜಾಸ್ತಿಯಾಗಿ ಕಾಲೇಜುಗಳು ಯಾವ ವಿಶ್ವವಿದ್ಯಾನಿಲಯದಲ್ಲಿಯೂ ಇರಬಾರದು, ಹೆಚ್ಚಿಗೆ ಕಾಲೇಜುಗಳಿದ್ದರೆ ಬೇರೆ ವಿಶ್ವವಿದ್ಯಾನಿಲಯವಿರಬೇಕು, ವಿದ್ಯಾಭ್ಯಾಸ ಸರಿಯಾಗಿ ನಡೆಯುವುದಕ್ಕೆ ಈ ರೀತಿಯಾಗಿರಬೇಕು ಎನ್ನುವ ಒಂದು ಮಾದರಿ (ನಾರ್ಮ್ಸ್) ಹಾಕಿಕೊಂಡಿದ್ದಾರೆ.

1-30 P. M.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಾನು ಕೇಳಿದ್ದು ಮೈಸೂರು ಸಂಸ್ಥಾನದಲ್ಲಿ ನಾಲ್ಕನೇ ವಿಶ್ವವಿದ್ಯಾನಿಲಯ ಬೇಕು ಎಂದು ಹೇಳುತ್ತೀರಾ ಅಥವಾ ಬೇಡ ಎಂದು ಹೇಳುತ್ತೀರಾ ?

Sri A. R. BADARINARAYANA —We have appointed a Committee. It is going into that question. The question has not been decided.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು (ಅ)ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಹಾಗಾದರೆ ಎಷ್ಟು ಕಾಲ ಬೇಕಾಗುತ್ತದೆ ? ಯಾವಾಗ ತೀರ್ಮಾನ ತಗೆದುಕೊಳ್ಳುತ್ತೀರಿ ? ಈ ಪ್ರಶ್ನೆ ಉದ್ಭವಿಸಿ ಬಹಳ ಕಾಲ ಆಯಿತು. ಯಾವಾಗ ಅಂತಿಮ ತೀರ್ಮಾನ ತಗೆದುಕೊಳ್ಳುತ್ತೀರಿ ?

Sri A. R. BADARINARAYANA.—The financial implications will have to be examined. A detailed and thorough examination of the matter has got to be conducted and it is being done.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ರಾಜ್ಯದಲ್ಲಿ 4ನೇ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವುದಕ್ಕೆ ಹಣದ ಕೊರತೆ ಇದೆ ಎಂದು ಹೇಳಿದರಿ. ಈ ಸಂದರ್ಭದಲ್ಲಿ ಬೇರೆ ವಿಶ್ವವಿದ್ಯಾನಿಲಯವನ್ನೂ, ಬೇರೆ ಕಾಲೇಜುಗಳನ್ನೂ ಆರಂಭಿಸುತ್ತಾ ಇರುವಾಗ ಸರ್ಕಾರ ಆದಕ್ಕೆ ಮಾತ್ರ ದುಡ್ಡು ಇದೆ, ಇದಕ್ಕೆ ಮಾತ್ರ ದುಡ್ಡು ತಮ್ಮ ಸರ್ಕಾರದಲ್ಲಿ ಇಲ್ಲವೇ ?

ಶ್ರೀ ಎ. ಆರ್. ಬದರಿನಾರಾಯಣ.—ಹಣದ ಕೊರತೆ ಇದೆ ಎಂದು ಹೇಳಲಿಲ್ಲಾ. It is still under examination ಎಂದು ಹೇಳಿದೆ.